# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಎಂವೈಎಸ್/2312-2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 13/01/2022.

←18

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಎಸ್.ಎನ್.ಚಂದ್ರಕಲಾ, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಸಕಲೇಶಪುರ, ವಾಸ ಬಾಳಗದ್ದೆ, ಸಕಲೇಶಪುರ ಟೌನ್,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

-----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಹಾಸನ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಎಸ್.ಎನ್.ಚಂದ್ರಕಲಾ, ಸಾಂಖ್ಯಿಕ ನಿರೀಕ್ಷಕರು, ತಾಲ್ಲೂಕು ಕಛೇರಿ, ಸಕಲೇಶಪುರ, ವಾಸ ಬಾಳಗದ್ದೆ, ಸಕಲೇಶಪುರ ಟೌನ್,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಪರಮೇಶ ಬಿನ್ ಲೇಟ್ ರಾಮಯ್ಯ, ಅರಸುನಗರ, ಚಿಕ್ಕನಾಯಕನಹಳ್ಳಿ ದಾಖ್ಲೆ, ಬಾಳ್ಳುಪೇಟೆ ಅಂಚೆ, ಸಕಲೇಶಪುರ ತಾಲ್ಲೂಕು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

### 2. ದೂರಿನ ಸಂಕ್ಷಿಪ್ತ ಮಾಹಿತಿ :-

i) ದೂರುದಾರರು ತಮ್ಮ ದೂರಿನಲ್ಲಿ, ತನ್ನ ತಂದೆ ಶ್ರೀ ರಾಮಯ್ಯ ಬಿನ್ ಲೇಟ್ ಹನುಮಯ್ಯ ರವರು ದಿನಾಂಕ: 22-08-2001 ರಂದು ಮರಣ ಹೊಂದಿದ್ದು, ದೂರುದಾರರ ವೈಯಕ್ತಿಕ ಕೆಲಸಗಳಿಗೆ, ತನ್ನ ತಂದೆಯವರ ಮರಣ ದೃಢೀಕರಣ ಪತ್ರ ಕೋರಿ ಅರ್ಜಿಯನ್ನು ಸಕಲೇಶಪುರ ತಹಶೀಲ್ದಾರ್ ಕಛೇರಿಗೆ ನೀಡಿರುತ್ತಾರೆ. ಸದರಿ ಮರಣ ದೃಢೀಕರಣ ಪತ್ರವನ್ನು ಎದುರುದಾರರು ನೀಡಬೇಕಾಗಿದ್ದು, ಎದುರುದಾರರು ದೂರುದಾರರಿಗೆ ನಿಮ್ಮ ತಂದೆಯವರು ಮರಣ ಹೊಂದಿ 17 ರಿಂದ 18 ವರ್ಷಗಳಾಗಿದೆ, ನೀವು ಕೋರ್ಟಿಗೆ ಹೋಗಿ ಮರಣ ದೃಢೀಕರಣ ಪತ್ರ ತೆಗೆದುಕೊಳ್ಳಲು 5000/- ರೂಪಾಯಿ ಖರ್ಚಾಗಿರುತ್ತದೆ. ಇಲ್ಲೇ ಆದರೆ 4000/- ರೂ ಆಗುತ್ತೆ, ನೀವು ಒಪ್ಪುವುದಾದರೆ ರೆಡಿ

ಮಾಡಿಸಿಕೊಡುತ್ತೇನೆ ಎಂದು ತಿಳಿಸಿರುತ್ತಾರೆ. ನಂತರ ದೂರುದಾರರು ಹಣ ತಂದಿಲ್ಲ ನಾಳೆ ಬರುತ್ತೇನೆ ಎಂದು ಹೇಳಿ, ತನ್ನ ಬಳಿ ಇದ್ದ 200/- ರೂ ಹಣವನ್ನು ಕೊಟ್ಟು, ಅವರ ಪೋನ್ ನಂಬರ್ ತೆಗೆದುಕೊಂಡು ಊರಿಗೆ ಹೋಗಿ, ದಿನಾಂಕ: 25-5-2018 ರಂದು ಕಛೇರಿ ವೇಳೆಯಲ್ಲಿ ಎದುರುದಾರರ ಮೊಬೈಲ್ ನಂ: 9449929083ಗೆ ದೂರುದಾರರ ತನ್ನ ಬಾಬ್ತು ಮೊಬೈಲ್ ನಂ: 8971640922 ನಿಂದ ಕರೆ ಮಾಡಿ 5000/- ರೂ. ಹಣ ಹೊಂದಿಸಲಾಗುವುದಿಲ್ಲ ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ, ಕಡೆಯದಾಗಿ 2000/- ರೂ ತೆಗೆದುಕೊಂಡು ಬನ್ನಿ ಎಂದು ಎದುರುದಾರರು ತಿಳಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್‌ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿದರಿಂದ ದಿನಾಂಕ: 28-05-2018ರಂದು ದೂರನ್ನು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಹಾಸನ, ಇವರಿಗೆ ಕೊಟ್ಟಿರುತ್ತಾರೆ. ಈ ಸಂಬಂಧವಾಗಿ ಮೊ.ಸಂಖ್ಯೆ: 05/2018 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7 ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

ii). ದಿನಾಂಕ: 28-05-2018 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀಮತಿ ಶಕು.ಎಂ.ಸಿ. ಪಂಚ-1, ಶ್ರೀ ಜಿ.ಆರ್.ಅರುಣ್ ಕುಮಾರ ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 2,000/- (ಹಣದ ಡಿನಾಮಿನೇಷನ್ 500 x 4) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚ-2 ರವರು ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-1 ರವರು ಸದರಿ ಹಣದ ವಿವರವನ್ನು ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-1 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ 2,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ಪ್ಯಾಂಟಿನ ಮುಂಬಾಗದ ಬಲಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಬಲಗೈಯಿಂದ ತಲೆ ಸವರಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿ ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಅದನ್ನು ಉಪಯೋಗಿಸುವ ರೀತಿಯನ್ನು ತಿಳಿಸಿಕೊಟ್ಟಿರುತ್ತಾರೆ ಮತ್ತು ಪಂಚ-2 ಶ್ರೀ ಅರುಣ್ ಕುಮಾರ್ ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ ದಿ: 28-05-2018 ರಂದು ಬೆ: 11.20 ರಿಂದ ಮಧ್ಯಾಹ್ನ 1.50 ಘಂಟೆಯವರೆಗೆ ಬರೆದಿರುತ್ತಾರೆ.

iii). ಅದೇ ದಿನ ಅಂದರೆ, ದಿನಾಂಕ: 28-05-2018 ರಂದು ತನಿಖಾಧಿಕಾರಿ, ಸಿಬ್ಬಂದಿ, ದೂರುದಾರರು, ಇವರುಗಳು ಎದುರುದಾರರು ಕರ್ತವ್ಯ ನಿರ್ವಹಿಸುವ ಸಕಲೇಶಪುರ ಮಿನಿ ವಿಧಾನಸೌಧದ ಹತ್ತಿರ ಮಧ್ಯಾಹ್ನ 3.30ಕ್ಕೆ. ಬಂದಿರುತ್ತಾರೆ. ನಂತರ ದೂರುದಾರರು ಮತ್ತು ಪಂಚ-2 ರವರ ಜೊತೆಗೆ, ಮಿನಿ ವಿಧಾನಸೌಧದ ಆಡಳಿತ ಶಾಖೆ ಕೊಠಡಿಯಲ್ಲಿದ್ದ ಎದುರುದಾರರನ್ನು ಭೇಟಿ ಮಾಡಿ, ಮೇಡಂ ನಾನು ಬೆಂಗಳೂರಿಗೆ ಹೋಗಬೇಕು, ತಂದೆಯವರ ಡೆತ್ ಸರ್ಟಿಫಿಕೇಟ್

ಆಗಿದೆಯೆಂದು ಕೇಳಿದಾಗ, ಅವರು ಒಂದು ಆಗಿದೆ, ಇನ್ನೊಂದು ಆಗಿಲ್ಲ ಎಂದು ಹೇಳಿ ಕೈ ಸನ್ನೆಯಿಂದ ಹಣ ಕೊಡುವಂತೆ ಕೇಳಿದಾಗ, ದೂರುದಾರರು ತನ್ನ ಬಳಿ ಇದ್ದ ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಎದುರುದಾರರಿಗೆ ಕೊಟ್ಟಾಗ, ಎದುರುದಾರರು ಸದರಿ ಹಣವನ್ನು ಪಡೆದು, ಎರಡೂ ಕೈಗಳಿಂದ ಎಣಿಸಿ ಬಲಗೈಯಿಂದ ತೆಗೆದುಕೊಂಡು, ಎದುರುದಾರರ ಎಡ ಬಾಗದಲ್ಲಿದ್ದ ಬೀರುವಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರಿಗೆ ಅವರ ತಂದೆಯ ಮೂಲ ಮರಣ ದೃಢೀಕರಣ ಪತ್ರವನ್ನು ಕೊಟ್ಟು ಸಹಿ ಪಡೆದುಕೊಂಡಿರುತ್ತಾರೆ. ನಂತರ ದೂರುದಾರರು ನಿಗದಿತ ಸೂಚನೆಯನ್ನು ತನಿಖಾಧಿಕಾರಿಯವರಿಗೆ 3.50ಕ್ಕೆ ನಿಗದಿತ ವೇಳೆಯಲ್ಲಿ ನೀಡಿರುತ್ತಾರೆ. ಸೂಚನೆಯನ್ನು ಪಡೆದ ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ ದೂರುದಾರರು ಎದುರುದಾರರನ್ನು ಪರಿಚಯಿಸಿ ಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು, ಅವರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿಯು, ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಎದುರುದಾರರು ಲಂಚದ ಹಣವನ್ನು ಬೀರುವಿನಿಂದ ತೆಗೆದು ಹಾಜರುಪಡಿಸಿದಾಗ, ಪಂಚ-1ರವರು, ಪ್ರಾಯೋಗಿಕ ಪಂಚನಾಮೆಯ ವೇಳೆಯಲ್ಲಿ ಬರೆದ ಮೌಲ್ಯ ಮತ್ತು ನಂಬರಿಗೆ ತಾಳೆ ಮಾಡಿ, ಖಾತ್ರಿಪಡಿಸಿಕೊಂಡ ನಂತರ ತನಿಖಾದಿಕಾರಿ ಲಂಚದ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಸಿಬ್ಬಂದಿ ಲಂಚದ ಹಣ ಇಟ್ಟಿದ್ದ ಸ್ಥಳವನ್ನು ಹತ್ತಿಯಿಂದ ಒರೆಸಿ ಅದನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ಕುರಿತು ದೂರುದಾರರಿಂದ ಲಂಚದ ಹಣ ಪಡೆದ ಬಗ್ಗೆ ಸಮಜಾಯಿಷಿಕೆ ನೀಡುವಂತೆ, ಕೇಳಿದಾಗ, ಎದುರುದಾರರು ತನ್ನ ಸಮಜಾಯಿಷಿಯಲ್ಲಿ ......... **“ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ನಾನು ಅವನಿಗೆ ಹಣ ಕೇಳಲಿಲ್ಲ, ಅರಸು ನಗರ ನಿವಾಸಿ ಆದ ಪರಮೇಶ ರವರು ಅವರ ಅಪ್ಪನ ದೃಡೀಕರಣ ಪತ್ರ ರೆಡಿಮಾಡಿಸಿಕೊಡಲು ಎಷ್ಟು ಆಗುತ್ತೆ ಎಂದು ಕೇಳಿದರು. ಅದಕ್ಕೆ ಲಾಯರ್ 02 ರಿಂದ 03 ಸಾವಿರ ರೂಗಳಾಗುತ್ತೆ ಎಂದು ಹೇಳಿದೆ ಅವರು ಪುನ: ಪೋನ್ ಮಾಡಿ ಹೇಳಿದಾಗಲೂ ನಾನು ಹೇಳಿದ್ದು ಅಷ್ಟೆ, 2 ಸಾವಿರ ಆಗಬಹುದೆಂದು, ನಾನು ಅವನನ್ನು ಬರಲು ಹೇಳಿರಲಿಲ್ಲ ಅವನು ಉದ್ದೇಶಪೂರ್ವಕವಾಗಿ, ಬಂದು ಹಣ ನೀಡಿ, ನನ್ನ ಮೇಲೆ ಆರೋಪ ಮಾಡಿದ್ದಾನೆ”.** ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ, ದಿನಾಂಕ: 28-05-2018ರಂದು ಸಂಜೆ 4.00 ರಿಂದ ರಾ: 8.00 ಗಂಟೆವರೆಗೆ ಸಕಲೇಶಪುರ ಮಿನಿ ವಿಧಾನಸೌಧ ಒಳಬಾಗ, ಆಡಳಿತ ಶಾಖೆಯ ಒಳಬಾಗದ ಕಚೇರಿಯಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

iv). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

v). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

vi). ಎದುರುದಾರರಿಗೆ ದಿ: 29/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 21/10/2021 ಹಾಗೂ ದಿ: 25/10/2021ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ಹಾಸನ ಲೋಕಾಯುಕ್ತ ಪೊಲೀಸರು ತನ್ನ ವಿರುದ್ಧ ಮಾಡಿರುವ ಆರೋಪಗಳು ಸುಳ್ಳು, ದೂರುದಾರರು ತನ್ನ ತಂದೆಯ ಮರಣದ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಅರ್ಜಿಯನ್ನು ತಾನು ಪಡೆದು ತನ್ನ ಪಾಲಿನ ಕರ್ತವ್ಯವನ್ನು ಮಾಡಿದ್ದೇನೆ. ದಿ: 25/05/2018 ರಂದು ದೂರುದಾರರ ತಂದೆಯ ಮರಣದ ಪ್ರಮಾಣ ಪತ್ರಕ್ಕೆ ತಹಶೀಲ್ದಾರವರು ಸಹಿ ಮಾಡಿರುತ್ತಾರೆ. ದೂರುದಾರರಿಂದ ತಾನು ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಹಾಗೂ ಪಡೆದಿರುವುದಿಲ್ಲ. ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 2(i), 2(ii), 2(v)ರ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ದಿ: 25/10/2021ರ ಪತ್ರದಲ್ಲಿಯೂ ಸಹ ತಾನು ದೂರುದಾರರಿಂದ ಯಾವುದೇ ಲಂಚದ ಹಣವನ್ನು ಕೇಳಿರುವುದಿಲ್ಲ, ದೂರುದಾರರು ನನಗೆ ಪೋನ್ ಮಾಡಿ, ನನಗೆ 05 ಕಾಪಿ ಬೇಕು ಕೊಡುತ್ತೀರಾ ಎಂದಾಗ ನಾನು ಇಲ್ಲ 02 ಕಾಪಿ ಕೊಡುತ್ತೇನೆ ಎನ್ನುವುದನ್ನು 02 ಎನ್ನುವುದು ರೆಕಾರ್ಡ್ ಮಾಡಿ, 2000/- ರೂ. ಎಂದು ದೂರಿದ್ದಾರೆ ಹಾಗೂ ತನ್ನ ವೈಯಕ್ತಿಕ ಸಮಸ್ಯೆಗಳನ್ನು ಬರೆದುಕೊಂಡಿರುತ್ತಾರೆ ಹಾಗೂ ತನ್ನನ್ನು ಇಲಾಖಾ ವಿಚಾರಣೆಯಿಂದ ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ಇಲಾಖಾ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

3. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

4. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ

ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

5. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18-1-22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು